ದಿನಾಂಕ: 11.01.2022ರಂದು ಬೆಳ್ಳಗ್ಗೆ 10.30 ಗಂಟೆಗೆ ಶಿವನಗರ ವಾರ್ಡ್ ನಂ. 107 ರಲ್ಲಿ ನೋಡಲ್ ಅಧಿಕಾರಿಯವರಾದ ಶ್ರೀ ಲಿಂಗಣ್ಣ ಗುಂಡಳ್ಳಿ, ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರ:-

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:-**

1. ಶ್ರೀ ಪೂಜಾರಪ್ಪ, ಸಹಾಯಕ ಅಭಿಯಂತರರು, ವಾರ್ಡ್ ನಂ. 107 ಶಿವನಗರ [ಪ್ರಭಾರ]
2. ಶ್ರೀ ಅನಿಕೇಶ್, ಹಿರಿಯ ಆರೋಗ್ಯ ಪರಿವೀಕ್ಷರು;
3. ಶ್ರೀ ನಾಗರಾಜ್.ಕೆ.ಬಿ. ಸ.ಅ. ಬೆಂ.ಜ.ಮಂ.
4. ಶ್ರೀ ಶಿವರಾಮಯ್ಯ, ಹಿರಿಯ ಆರೋಗ್ಯ ಪರಿವೀಕ್ಷಕರು
5. ಶ್ರೀ ಲಿಂಗಣ್ಣಗೌಡ.ಎನ್.ಜಿ.ಓ
6. ಶ್ರೀ ಕೇಶವಮೂರ್ತಿ. ಬಿ.ಜೆ.ಪಿ
7. ಶ್ರೀ ಹನಿಕೇಶ್, ಎಸ್.ಹೆಚ್.ಐ. 107
8. ಶ್ರೀ ಮಂಜಣ್ಣ. ಬಿ.ಜೆ.ಪಿ
9. ಶ್ರೀ ದಿಲೀಪ್.ಎಸ್.ಆರ್.
10. ಶ್ರೀ ವಸಂತ್ ಕುಮಾರ್,
11. ಶ್ರೀ ವಿಜಯಕುಮಾರ್, ಸದಸ್ಯರು,
12. ಶ್ರೀ ಪ್ರಜ್ವಲ್.ಆರ್. ತೋಟಗಾರಿಕೆ ಇಲಾಖೆ,
13. ಶ್ರೀ ಶ್ರೀರಾಮ್.ಅರಣ್ಯ ಇಲಾಖೆ,

ಶ್ರೀ ಪೂಜಾರಪ್ಪ, ಸಹಾಯಕ ಕಾರ್ಯದರ್ಶಿಗಳು ಹಾಗೂ ಸಂಚಾಲಕರು, ವಾರ್ಡ್ ನಂ. 107ರವರು ಸಭೆಗೆ ಆಗಮಿಸಿರುವ ಎಲ್ಲರಿಗೂ ಸ್ವಾಗತ ಕೋರುತ್ತಾ, ಈ ಕೆಳಗಿನ ಅಂಶಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು.

1. ನೋಡಲ್ ಅಧಿಕಾರಿಗಳು, ವಾರ್ಡಿನಲ್ಲಿ ಒಣಗಿರುವ ಮತ್ತು ಕಡಿದಿರುವ ಮರಗಳ ಕೊಂಬೆಗಳನ್ನು ತೆರವುಗೊಳಿಸುವಂತೆ ಸೂಚಿಸಿದರು. ಸಭೆಯಲಿದ್ದ ಸದಸ್ಯರು ಹಾಗೂ ನೋಡಲ್ ಅಧಿಕಾರಿಗಳು ರಸ್ತೆಯಲ್ಲಿ ಬಿದ್ದಿರುವ ಮರಗಳ ಕೊಂಬೆಗಳನ್ನು ತೆರವುಗೊಳಿಸಲು ವಿಳಂಭ ಮಾಡುತ್ತಿರುವ ಬಗ್ಗೆ ಚರ್ಚಿಸಲಾಯಿತು. ಇದಕ್ಕೆ ಉತ್ತರವಾಗಿ ವಾರ್ಡಿನ ಅಭಿಯಂತರರಿಗೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸುವಂತೆ ತಿಳಿಸಿದರು

2. ಬೆಂಗಳೂರು ನೀರು ಮತ್ತು ಒಳಚಂರಡಿ ಮಂಡಳಿಯವರು ಯಾವುದೇ ಸಭೆಗೆ ಹಾಜರಾಗಿರುವುದಿಲ್ಲವೆಂದು ಹಲವು ಭಾರಿ ದೂರವಾಣಿ ಮುಖ್ಯಾಂತರ ಸಂಪರ್ಕಿಸಿದರು ಸಹ ಸಭೆಗೆ ಹಾಜರಾಗಿರುವುದಿಲ್ಲವೆಂದು ಚರ್ಚಿಸುವ ಸಮಯದಲ್ಲಿ ಇಲಾಖಾ ವತಿಯಿಂದ ವಾಟರ್ ಪರಿವೀಕ್ಷಕರು ಹಾಜರಾಗಿದ್ದು, ಕೆಲಸ ಭಾಗಗಳಲ್ಲಿ ಮ್ಯಾನ್ ಹೋಲ್ ಮತ್ತು ನೀರಿಗೆ ಸಂಬಂಧಿಸಿದ ಕೊಳವೆಗಳು ಹೊಡೆದು ಹೋಗಿ ಅಲ್ಲಲ್ಲಿ ನೀರು ಸೋರಿಕೆಯಾಗಿ ಉಪಯೋಗಿಸಲು ಬಹಳ ಸಮಸ್ಯೆಯಾಗಿರುತ್ತದೆ ಎಂದು ಸಭೆಯಲ್ಲಿ ಚರ್ಚಿಸಿದಾಗ ಮುಂದಿನ ದಿನಗಳಲ್ಲಿ ಈ ಎಲ್ಲಾ ನ್ಯೂನತೆಗಳನ್ನು ಸರಿಪಡಿಸುತ್ತೇವೆ ಎಂದು ಪರಿವೀಕ್ಷಕರು ಸಭೆಯಲ್ಲಿ ತಿಳಿಸಿರುತ್ತಾರೆ.

3. ವಾರ್ಡ್ ಕಮಿಟಿ ಸದಸ್ಯರು ಮಾತನಾಡುತ್ತ, 12ನೇ ಮುಖ್ಯ ರಸ್ತೆ, ರಾಜಾಜಿನಗರ ಇಲ್ಲಿ ಮರದ ಕೊಂಬೆಯು ಕೆಳಗೆ ಬಾಗಿರುವುದರಿಂದ ರಸ್ತೆಯಲ್ಲಿ ಸಂಚರಿಸುವಾಗ ದೊಡ್ಡ ವಾಹನಗಳಿಗೆ ಕೊಂಬೆಯು ಅಡ್ಡ ಬರುತ್ತಿರುವುದರಿಂದ ಅಪಘಾತವಾಗುವ ಸಂಭವವಿದ್ದು, ಸದರಿ ಕೊಂಬೆಯನ್ನು ತೆರವುಗೊಳಿಸಬೇಕೆಂದು ಸಭೆಗೆ ತಿಳಿಸಿದರು. ಇದಕ್ಕೆ ಉತ್ತರವಾಗಿ ಸಭೆಯಲ್ಲಿ ಹಾಜರಿದ್ದ ಅರಣ್ಯ ಇಲಾಖೆಯವರು ಪರಿಶೀಲಿಸಿ, ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

ಪು.ತಿ.ನೋ

4. ಸಭೆಯಲ್ಲಿದ್ದ ಸಾರ್ವಜನಿಕರು ಮಾತನಾಡುತ್ತಾ, 18ನೇ ಬಿ ಮುಖ್ಯ ರಸ್ತೆ, 5ನೇ ಬ್ಲಾಕ್, ರಾಜಾಜಿನಗರ ಇಲ್ಲಿ ಒಳಚರಂಡಿಯ ಪೈಪ್ ಬ್ಲಾಕ್ ಆಗಿ, ಆಗಿಂದಾಗೆ ಒಳಚರಂಡಿಯ ನೀರು ರಸ್ತೆಯಲ್ಲಿ ಹರಿಯುತ್ತಿರುವುದರಿಂದ ಅಲ್ಲಿನ ನಿವಾಸಿಗಳಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು. ಇದಕ್ಕೆ ಉತ್ತರವಾಗಿ ಸಭೆಯಲ್ಲಿ ಹಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರು ಪರಿಶೀಲಿಸಿ, ದುರಸ್ಥಿಪಡಿಸಲು ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

5. ವಾರ್ಡ್ ಕಮಿಟಿ ಸದಸ್ಯರು ಮಾತನಾಡುತ್ತಾ, ಬಿ.ಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ ಪೈಪ್ ಅಳವಡಿಸುವ ಕಾಮಗಾರಿಯನ್ನು ನಿರ್ವಹಿಸಲಾಗಿರುತ್ತದೆ. ಆದರೆ ಮಳೆ ಬಂದ ಮೇಲೆ ಪೈಪ್ ಅಳವಡಿಸಿರುವ ಜಾಗದಲ್ಲಿ ಮಣ್ಣು ಕುಸಿದಿರುವುದರಿಂದ ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗುತ್ತಿರುವುದಾಗಿ ಸಭೆಗೆ ತಿಳಿಸಿದರು. ಇದಕ್ಕೆ ಉತ್ತರವಾಗಿ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರು ಕಾಮಗಾರಿಯು ಪ್ರಗತಿಯಲ್ಲಿದ್ದು, ಕುಸಿದಿರುವ ಜಾಗವನ್ನು ದುರಸ್ಥಿಪಡಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದಂತೆ ಸಭೆಯಲ್ಲಿ ತಿಳಿಸುವ ದೂರುಗಳನ್ನು ಸರಿಪಡಿಸಿ, ಮುಂದಿನ ಸಭೆಯಲ್ಲಿ ವರದಿಯನ್ನು ನೀಡುವಂತೆ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಾರ್ಯದರ್ಶಿ
ಾರ್ಡ್ ಸಮಿತಿ
ಾರ್ಡ್ ನಂ. 107

ಸಹಿ/-
ಶ್ರೀ ಲಿಂಗಣ್ಣ ಗುಂಡಳ್ಳಿ
ನೋಡಲ್ ಅಧಿಕಾರಿಗಳು